ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾ ದಂ. ರವರ ನ್ಯಾಯಾಲಯ, ಪಿರಿಯಾಪಟ್ಟಣ

ಸಿಸಿ 3741/2022

| | | |
|---|---|---|
| ಸಾಕ್ಷಿಯ ಹೆಸರುಃ | ಜಗದೀಶ ಪಿ | ಪ್ರಾಸಾಃ 5 |
| ತಂದೆ ಹೆಸರುಃ | ಪುಟ್ಟಬಸಪ್ಪ | ಚಾಸಾಃ 18 |
| ವಯಸ್ಸುಃ | 44 ವರ್ಷ | ಪ್ರಮಾಣೀಕರಿಸಿದ ದಿಃ14.08.2025 |
| ಉದ್ಯೋಗಃ | ವೃತ್ತ ನಿರೀಕ್ಷಕರು, ಮಲೇಮಹದೇಶ್ವರ ಬೆಟ್ಟ. | |
| ವಾಸಸ್ಥಳಃ | ಮಲೇಮಹದೇಶ್ವರ ಬೆಟ್ಟ. | |

ಮುಖ್ಯ ವಿಚಾರಣೆಃ ಸಸಅ ರಿಂದಃ

ನಾನು 2021 ರಿಂದ 2022 ವರೆಗೆ ಪಿರಿಯಾಪಟ್ಟಣ ಪೊಲೀಸ್ ವೃತ್ತದಲ್ಲಿ ವೃತ್ತ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

1. ದಿಃ26.04.2022 ರಂದು ಸಂಜೆ 5.00 ರ ಸಮಯದಲ್ಲಿ ಚಸಾ.1 ರವರು ಠಾಣೆಗೆ ಹಾಜರಾಗಿ ನೀಡಿದ ದೂರನ್ನು ಸ್ವೀಕರಿಸಿ, ಠಾಣಾ ಮೊ.ಸಂ. 116/2022 ಕಲಂ 279 ಮತ್ತು 304(ಎ) ಐಪಿಸಿ ಅಡಿಯಲ್ಲಿ ಪ್ರಕರಣವನ್ನು ದಾಖಲಿಸಿ, ಪ್ರ.ವ.ವರದಿಯನ್ನು ಘನ ನ್ಯಾಯಾಲಯಕ್ಕೆ ಸಲ್ಲಿಸಿಕೊಂಡಿರುತ್ತೇನೆ.
2. ನಂತರ ಅದೇ ದಿನ ಕೃತ್ಯದ ನಡೆದ ಸ್ಥಳದ ಮಹಜರ್ ಗಾಗಿ ಚಾಸಾ. 16 ರವರನ್ನು ನಿಯೋಜಿಸಿದ್ದು, ಸದರಿ ರವರು ಕೃತ್ಯದ ನಡೆದ ಸ್ಥಳದಮಹಜರ್ ಕ್ರಮವನ್ನು ಜರುಗಿಸಿ, ಅಪಘಾತ ಪಡಿಸಿದ ವಾಹನಗಳನ್ನು ಅಮಾನತು ಪಡಿಸಿಕೊಂಡು, ಠಾಣೆಗೆ ಬಂದು ವರದಿಯನ್ನು ಮಾಡಿರುತ್ತಾರೆ. ಅದೇ ದಿನ ನಾನು ಪಿರಿಯಾಪಟ್ಟಣ ಸರ್ಕಾರಿ ಆಸ್ಪತ್ರೆಯ ಶವಗಾರಿಕೆ ತೆರಳಿ ಮೃತ ಮೆಲಾರಿಗೌಡ ರವರ ಶವ ತನಿಖೆಯನ್ನು ಸಂಜೆ 05.30 ರಿಂದ 7.30 ರ ವರೆಗೆ ಪಂಚರಾದ ಚಾಸಾ.7 ರಿಂದ 9 ರವರ ಸಮಕ್ಷಮ ಮಾಡಿರುತ್ತೇನೆ ಮತ್ತು ಆ ಕಾಲದಲ್ಲಿ ರಕ್ತ ಸಂಬಂಧಿ ಚಾಸಾ.10 ಹಾಗೂ 11 ರವರ ಹೇಳಿಕೆಯನು ಪಡೆದಿರುತ್ತೇನೆ.
3. ದಿಃ 04.05.2022 ರಂದು ವಾಹನಗಳನ್ನು ಐಎಂವಿ ತಪಾಸಣೆಗಾಗಿ ಚಾಸಾ.14 ರವರಿಗೆ ಕಳು ಹಿಸಿಕೊಟ್ಟಿರುತ್ತೇನೆ. ಅದೇ ದಿನ ಈ ಪ್ರಕರಣದ ಆರೋಪಿ ಮೋಹನ್ ರವರು ಸ್ವತ ಠಾಣೆಗೆ ಹಾಜರಾಗಿ ಸದರಿ ರವರಿಗೆ ಕಲಂ 41(ಎ) ಸಿಆರಪಿಸಿ ಅಡಿಯಲ್ಲಿ ನೋಟಿಸನ್ನು ಜಾರಿ ಮಾಡಿರುತ್ತೇನೆ. ಅದೇ ದಿನ ಅಪಘಾತ ಪಡಿಸಿದ ಕಾರ ಮಾಲೀಕರಾದ ನಳಿನಿ ರವರಿಗೆ ಕಲಂ 133 ಐಎಂವಿ ಅಡಿಯಲ್ಲಿ ನೋಟಿಸ್ ನ್ನು ಜಾರಿ ಮಾಡಿ, ಉತ್ತರವನ್ನು ಪಡೆದುಕೊಂಡಿರುತ್ತೇನೆ. ಅದೇ ದಿನ ಇಂಡಿಮಿನಿಟಿ ಬಾಂಡ್ ನ್ನು ಪಡೆದುಕೊಂಡು ಆರ್.ಸಿ. ಮಾಲೀಕರಿಗೆ ಕಾರನ್ನು ಬಿಡುಗಡೆ ಮಾಡಿರುತ್ತೇನೆ. ಅದೇ ದಿನ ಚಾಸಾ.2 ರಿಂದ 4 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ.

4. ದಿಃ 26.06.2022 ರಂದು ಪಿರಿಯಾಪಟ್ಟಣ ಸರ್ಕಾರಿ ಆಸ್ಪತ್ರೆಯಿಂದ ಚಾಸಾ,13 ರವರಿಂದ ಮೃತನ ಪಿ ಎಂ ವರದಿಯನ್ನು ಪಡೆದಕೊಂಡಿರುತ್ತೇನೆ.
5. ದಿಃ 15.07.2022 ರಂದು ಚಾಸಾ.14 ರವರಿಗೆ ವಾಹನಗಳ ಐಎಂವಿ ವರದಿಗಳನ್ನು ಪಡೆದುಕೊಂಡಿರುತ್ತೇನೆ. ಅದೇ ದಿನ ಆರೋಪಿತನ ಮೇಲೆ ಘನ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿಕೊಂಡಿರುತ್ತೇನೆ.
6. ಸಾಕ್ಷಿಯು ನ್ಯಾಯಾಲಯದ ಮುಂದಿರುವ ದೂರನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.1 ಎಂದು ಗುರುತಿಸಿದ್ದು, ಅದರಲ್ಲಿರವ ಸಾಕ್ಷಿಯ ಸಹಿಯನ್ನು ನಿಪಿ.**1(ಬಿ)** ಎಂದು ಗುರುತಿಸಲಾಯಿತು.
7. ಸಾಕ್ಷಿಯು ಪ್ರ.ವ.ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ.5 ಎಂದು ಗುರುತಿಸಿದ್ದು, ಅದರಲ್ಲಿರವ ಸಾಕ್ಷಿಯ ಸಹಿಯನ್ನು ನಿಪಿ.**5(ಎ)** ಎಂದು ಗುರುತಿಸಲಾಯಿತು.
8. ಸಾಕ್ಷಿಯು ಶವ ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ.**6** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.**6(ಎ)** ಎಂದು ಗುರುತಿಸಲಾಯಿತು.
9. ಸಾಕ್ಷಿಯು ಪಿ.ಎಂ.ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ.**7** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.**7(ಎ)** ಎಂದು ಗುರುತಿಸಲಾಯಿತು.
10. ಸಾಕ್ಷಿಯು ಐಎಂವಿ ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ.**8** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.**8(ಎ)** ಎಂದು ಗುರುತಿಸಲಾಯಿತು.
11. ಸಾಕ್ಷಿಯು 133 ನೊಟೀಸನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ.**9** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.**9(ಎ)** ಎಂದು ಗುರುತಿಸಲಾಯಿತು.
12. ಸಾಕ್ಷಿಯು 133 ನೊಟೀಸಿನ ಉತ್ತರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ.**10** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.**10(ಎ)** ಎಂದು ಗುರುತಿಸಲಾಯಿತು.
13. ಸಾಕ್ಷಿಯು 41 ಎ ನೊಟೀಸನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ.**11** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ. **11(ಎ)** ಎಂದು ಗುರುತಿಸಲಾಯಿತು.
14. ಸಾಕ್ಷಿಯು ಇಂಡಿಮಿನಿಟಿ ಬಾಂಡ್ ನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ.12 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ. **12(ಎ)** ಎಂದು ಗುರುತಿಸಲಾಯಿತು.
15. ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ

1. ನಾನು ಚಾಸಾ-01 ರವರಿಂದ ಯಾವುದೇ ದೂರನ್ನು ಸ್ವೀಕರಿಸಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ದೂರಿನ ಮೇಲೆ ಸುಳ್ಳು ಪ್ರ.ವ.ವರದಿ ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ.

2. ನಾನು ಸ್ಥಳ ಮಹಜರ ಕ್ರಮನ್ನು ಜರುಗಿಸಲು ಚಾಸಾ.16 ರವರನ್ನು ನೇಮಿಸಿಲ್ಲ ಎಂದರೆ ಸರಿಯಲ್ಲ. ನಾನು ಠಾಣೆಯಲ್ಲಿ ಕುಳಿತುಕೊಂಡು ಮಹಜರ ಕ್ರಮವನ್ನು ಮಾಡಿದ್ದೇನೆ ಎಂದರೆ ಸರಿಯಲ್ಲ.
3. ನಾನು ಯಾವುದೇ ಸಾಕ್ಷಿದಾರರ ಸಮಕ್ಷಮ ಶವ ತನಿಖೆಯನ್ನು ಮಾಡಿಲ್ಲ ಎಂದರೆ ಸರಿಯಲ್ಲ
4. ನಾನು ಯಾವುದೇ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದಿಲ್ಲ ಎಂದರೆ ಸರಿಯಲ್ಲ.
5. ನಾನು ಶನಿ ತನಿಖೆಯ ವರದಿಯನ್ನು ಪಡೆದಿಲ್ಲ ಎಂದೆರ ಸರಿಯಲ್ಲ.
6. ನಾನು ಐಎಂವಿ ವರದಿಯನ್ನು ಪಡೆದಿಲ್ಲ ಎಂದರೆ ಸರಿಯಲ್ಲ.
7. ನಾನು ಯಾವುದೇ ಇಂಡಿಮಿನಿಟಿ ಬಾಂಡ್ ನ್ನು ಪಡೆದುಕೊಂಡು ವಾಹನಗಳನ್ನು ಬಿಡುಗಡೆ ಮಾಡಿಲ್ಲ ಎಂದರೆ ಸರಿಯಲ್ಲ,
8. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ಅಂಶಗಳು ಸುಳ್ಳು ಎಂದರೆ ಸರಿಯಲ್ಲ.
9. ಆರೋಪಿಯ ವಿರುದ್ದ ಯಾವುದೇ ಆರೋಪ ಸಾಬಿತಾಗದೇ ಇದ್ದರೂ ಸಹ ಆರೋಪಿಯ ವಿರುದ್ದ ಸುಳ್ಳು ದೋಷಾರೋಪಣಪತ್ರವನ್ನು ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.
ಪಿರಿಯಾಪಟ್ಟಣ.